FEBRUARY 01, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಇಂದು, ಬೆಳಗ್ಗೆ 11 ಗಂಟೆಗೆ, 2026–27ನೇ ಸಾಲಿನ, ಕೇಂದ್ರದ ಆಯವ್ಯಯ ಮಂಡನೆ.
- ಗ್ರಾಹಕರ ಹಕ್ಕು ಉಲ್ಲಂಘನೆಗೆ, ಪರಿಹಾರ ಒದಗಿಸುವಲ್ಲಿ, ಕರ್ನಾಟಕ, ದೇಶಕ್ಕೆ ಎರಡನೇ ಸ್ಥಾನ.
- ಧಾರವಾಡ ಜಿಲ್ಲೆಯಿಂದ, ಮಾಹಿತಿ ಆಯೋಗಕ್ಕೆ, ಸಾವಿರದ 4 ನೂರಾ 85 ಮೇಲ್ಮನವಿ ಅರ್ಜಿಗಳು ಸಲ್ಲಿಕೆ.
- ಭಾರತೀಯ ಕರಾವಳಿ ಕಾವಲು ಪಡೆಯ, 50ನೇ ಸಂಸ್ಥಾಪನಾ ದಿನಾಚರಣೆ, ಇಂದು.

<><><>

ಈಗ ವಾರ್ತೆಗಳ ವಿವರ

<><><>

ಇಂದು, ಫೆಬ್ರುವರಿ 1, ಭಾನುವಾರ, ಬೆಳಗ್ಗೆ 11 ಗಂಟೆಗೆ, 2026–27ನೇ ಸಾಲಿನ, ಕೇಂದ್ರದ ಮುಂಗಡ ಪತ್ರವನ್ನು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, 9ನೇ ಬಾರಿಗೆ, ಮಂಡಿಸಲಿದ್ದಾರೆ.

<><><>

ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ, ಬೆಳಗ್ಗೆ 11 ಗಂಟೆಯಿಂದ, ಬಜೆಟ್ ಮಂಡನೆ ಪೂರ್ಣಗೊಳ್ಳುವ ವರೆಗೆ, ಸದಸ್ಯ ಉದ್ಯಮಿಗಳಿಗಾಗಿ, ನೇರ ಪ್ರಸಾರ ವ್ಯವಸ್ಥೆ ಮಾಡಲಾಗಿದೆ ಎಂದು, ಗೌರವ ಕಾರ್ಯದರ್ಶಿ ಉದಯ ರೇವಣಕರ ತಿಳಿಸಿದ್ದಾರೆ.

<><><>

ಸಂಸತ್ತಿನಲ್ಲಿ ಬಜೆಟ್ ಮಂಡನೆ ಪೂರ್ಣಗೊಳ್ಳುತ್ತಿದ್ದಂತೆ, ಬಜೆಟ್ ದಾಖಲೆಗಳು, ಮೊಬೈಲ್ ಅಪ್ಲಿಕೇ ´ನ್ ಹಾಗೂ ಜಾಲತಾಣಗಳಲ್ಲಿ, ಲಭ್ಯವಾಗಲಿವೆ.

<><><>

ಇಂದು ಲೋಕಸಭೆಯಲ್ಲಿ, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ಮಂಡಿಸಲಿರುವ, ಕೇಂದ್ರದ ಬಜೆಟ್ ವೀಕ್ಷಣೆ, ಬಳಿಕ, ಹೊಸ ದಿಲ್ಲಿಯಲ್ಲಿ ಆಯೋಜಿತ, ಚರ್ಚೆಯಲ್ಲಿ ಪಾಲ್ಗೊಳ್ಳಲು, ದೇಶದ ವಿವಿಧ ಭಾಗಗಳಿಂದ, ಹಲವು ವೃತ್ತಿಪರ ಕ್ಷೇತ್ರಗಳ, 30 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿವೆ.

<><><>

ಕೇಂದ್ರ ಸಾಮರ್ಥ್ಯ ಅಭಿವೃದ್ಧಿ ಆಯೋಗ ಹಾಗೂ ಹಣಕಾಸು ಸಚಿವಾಲಯ, ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಸಂಸ್ಥೆಯ, ವಿವೇಕಾ ಸ್ಕಾಲರ್ ಪ್ರೋಗ್ರಾಂ ಶಿಷ್ಯವೇತನ ಗಳಿಸಿದ, ಇಬ್ಬರು ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಿದೆ.

<><><>

ಮೂಲತಃ ಧಾರವಾಡದವರಾದ, ಪ್ರಸ್ತುತ ಬಾಗಲಕೋಟೆಯ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಸ್ನಾತಕೋತ್ತರ ಪದವಿಗಾಗಿ, ಅಧ್ಯಯನ ನಿರತ, ಬಷೀರಾ ಬಂಗಿ, ಆಯ್ಕೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಬಷೀರಾ ಬಂಗಿ ಧ್ವನಿ 45 ಸೆಕೆಂದುಗಳು

<><><>

ಮೂಲತಃ ಮೈಸೂರಿನವರಾದ ಎಲ್. ಧನ್ಯಾ, ಪ್ರಸ್ತುತ ಹಾಸನದ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ – ಹಿಮ್ಸ್ ನಲ್ಲಿ, ಎಂ.ಬಿ.ಬಿ.ಎಸ್. ವ್ಯಾಸಂಗ ನಿರತರಾಗಿದ್ದಾರೆ. ಅವರೂ ಸಹ, ಕೇಂದ್ರ ವಿತ್ತ ಸಚಿವರೊಂದಿಗೆ, ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಎಲ್. ಧನ್ಯಾ ಮೈಸೂರು ಧ್ವನಿ 40 ಸೆಕೆಂದುಗಳು

<><><>

ರಾಜ್ಯದಲ್ಲಿ ಶಿಕ್ಷಣದ ಗುಣಮಟ್ಟವನ್ನು, ಮತ್ತ ್ಟ ಬಲಪಡಿಸಲು, 2026–27ನೇ ಸಾಲಿನ, ರಾಜ್ಯ ಆಯವ್ಯಯದಲ್ಲಿ, ಶಿಕ್ಷಣ ಇಲಾಖೆಗೆ ಅಗತ್ಯ ಅನುದಾನದ ಬೇಡಿಕೆಗಳನ್ನು ಸಿದ್ಧಪಡಿಸಲು, ಶಾಲಾ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ ನೇತೃತ್ವದಲ್ಲಿ, ಬೆಂಗಳೂರಿನಲ್ಲಿ ಪೂರ್ವಭಾವಿ ಸಭೆ ನಡೆಯಿತು. ಈ ತಿಂಗಳ ಮೊದಲ ವಾರದಲ್ಲಿ, ಹಣಕಾಸು ಖಾತೆ ಸಚಿವ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬಜೆಟ್ ಪೂರ್ವಭಾವಿ ಸಭೆಗೆ, ಇಲಾಖೆಯ ಪ್ರಸ್ತಾವಗಳ ಕುರಿತು, ಅಪರ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ ಉಪಸ್ಥಿತಿಯಲ್ಲಿ, ಸಮಗ್ರ ಶಿಕ್ಷಣ ಕರ್ನಾಟಕ, ಕಚೇರಿಯಲ್ಲಿ, ಸುಧೀರ್ಘ ಸಭೆ ನಡೆಯಿತು.

<><><>

ಗ್ರಾಹಕರ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ, ಇತ್ಯರ್ಥ ಪಡಿಸಿ, ಪರಿಹಾರ ಒದಗಿಸುವಲ್ಲಿ, ಕರ್ನಾಟಕ, ದೇಶಕ್ಕೆ ಎರಡನೇ ಸ್ಥಾನದಲ್ಲಿದೆ ಎಂದು, ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ, ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ತಿಳಿಸಿದ್ದಾರೆ. ಬಳ್ಳಾರಿಯಲ್ಲಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ, ಮಧ್ಯಸ್ಥಿಕೆ ಕೇಂದ್ರದ, ನೂತನ ಕಟ್ಟಡ ಉದ್ಘಾಟಿಸಿ, ಮಾತನಾಡಿದರು. ರಾಜ್ಯದಲ್ಲಿ, ಒಟ್ಟು 34 ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಿವೆ. ಗ್ರಾಹಕರ ವ್ಯಾಜ್ಯಗಳ ತ್ವರಿತ ಇತ್ಯರ್ಥಕ್ಕಾಗಿ, ಹಂತ–ಹಂತವಾಗಿ, ಎಲ್ಲಾ ಜಿಲ್ಲೆಗಳಲ್ಲೂ ಮಧ್ಯಸ್ಥಿಕೆ ಕೇಂದ್ರಗಳು, ಕಾರ್ಯಾರಂಭಿಸಲಿವೆ ಎಂದರು.

<><><>

ಪ್ರಾದೇಶಿಕ ಅಸಮತೋಲನ ನಿವಾರಣೆ, ಪ್ರಸ್ತುತ ಸ್ಥಿತಿ–ಗತಿ ಬಗ್ಗೆ, ಅಧ್ಯಯನ ನಡೆಸಲು, ರಾಜ್ಯ ಸರ್ಕಾರ ನೇಮಿಸಿದ್ದ, ಖ್ಯಾತ ಅರ್ಥಶಾಸ್ತ್ರಜ್ಞ, ಪ್ರೊಫೆಸರ್ ಎಂ.ಗೋವಿಂದರಾವ್ ನೇತೃತ್ವದ ಸಮಿತಿ, ತನ್ನ ಅಂತಿಮ ವರದಿಯನ್ನು ಸಲ್ಲಿಸಿದೆ. ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಸಮಿತಿ ಅಂತಿಮ ವರದಿ ಸಲ್ಲಿಸಿತು. ಮುಖ್ಯ ಕಾರ್ಯದರ್ಶಿ, ಶಾಲಿನಿ ರಜನೀಶ ಉಪಸ್ಥಿತರಿದ್ದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಧಾರವಾಡ ಜಿಲ್ಲೆಯಿಂದ, ಮಾಹಿತಿ ಆಯೋಗಕ್ಕೆ, ಸಾವಿರದ 4 ನೂರಾ 85 ಮೇಲ್ಮನವಿ ಅರ್ಜಿಗಳು ಸಲ್ಲಿಕೆಯಾಗಿದ್ದು, ಮೇಲ್ಮನವಿ ಅರ್ಜಿಗಳ ಸಲ್ಲಿಕೆಯಲ್ಲಿ, ಧಾರವಾಡ ಜಿಲ್ಲೆ, ರಾಜ್ಯಕ್ಕೆ 7ನೇ ಸ್ಥಾನದಲ್ಲಿದೆ ಎಂದು, ರಾಜ್ಯ ಮಾಹಿತಿ ಆಯೋಗದ ಆಯುಕ್ತರಾದ, ರುದ್ರಣ್ಣ ಹರ್ತಿಕೋಟೆ, ಎಸ್.ರಾಜಶೇಖರ ಹಾಗೂ ಪ್ರಕಾಶ ಚನ್ನಾಳ್ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ವಿವಿಧ ಇಲಾಖೆಗಳ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಪ್ರಥಮ ಮೇಲ್ಮನವಿ ಅಧಿಕಾರಿಗಳಿಗೆ ಆಯೋಜಿಸಿದ್ದ, ಮಾಹಿತಿ ಹಕ್ಕು ಅಧಿ ನಿಯಮ – 2005 ಕಾರ್ಯಾಗಾರದಲ್ಲಿ, ಮಾತನಾಡಿದರು. ಅರ್ಜಿದಾರರಿಗೆ ಸಮರ್ಪಕ ಮಾಹಿತಿ ಪೂರೈಸದ, 95 ಜನ ಅಧಿಕಾರಿಗಳಿಗೆ, ಧಾರವಾಡ ಜಿಲ್ಲೆಯಲ್ಲಿ, 9 ಲಕ್ಷ 9 ಸಾವಿರದ 500 ರೂಪಾಯಿ ಗಳ ದಂಡ ವಿಧಿಸಲಾಗಿದೆ. 14 ಅಧಿಕಾರಿಗಳು 1 ಲಕ್ಷದ 15 ಸಾವಿರ ರೂಪಾಯಿ, ದಂಡ ಪಾವತಿಸಿದ್ದಾರೆ ಎಂದರು.

<><><>

ಭಾರತೀಯ ಕರಾವಳಿ ಕಾವಲು ಪಡೆಯ, 50 ನೇ ಸಂಸ್ಥಾಪನಾ ದಿನ ಇಂದು. ಇಂಡಿಯನ್ ಕೋಸ್ಟ್ ಗಾರ್ಡ್ಸ್, ಫೆಬ್ರುವರಿ 1, 1977 ರಲ್ಲಿ, ಭಾರತದ ಕಡಲ ವಲಯಗಳ ಭದ್ರತೆಗಾಗಿ, "ವಯಂ ರಕ್ಷಾಮಃ" – ನಾವು ರಕ್ಷಿಸುತ್ತೇವೆ ಎಂಬ ಧ್ಯೇಯದಡಿ, ಸ್ಥಾಪಿಸಲಾಯಿತು. ಕಳೆದ ವ  ರ್ಗಳಿಂದ, ಕಡಲ ಭದ್ರತೆಯ ಹೊಣೆಹೊತ್ತ, ಕರಾವಳಿ ಕಾವಲು ಪಡೆ, ಪ್ರಸಕ್ತ ವರ್ಷದಲ್ಲಿ, ಕರಾವಳಿ ಭದ್ರತೆಯನ್ನು ಮತ್ತಷ್ಟು ಬಲಪಡಿಸಿ, ಸಮುದಾಯದೊಟ್ಟಿಗೆ ಸಂವಹನವನ್ನು ಹೆಚ್ಚಿಸಲು, ಮತ್ತು ಕರಾವಳಿಯುದ್ದಕ್ಕೂ ದೀರ್ಘ ಶ್ರೇಣಿಯ ಗಸ್ತುಗಳನ್ನು ನಿಯೋಜಿಸುವುದರ ಮೇಲೆ, ಕೇಂದ್ರೀಕರಿಸಿದೆ.

<><><>

ಹಾವೇರಿ ಜಿಲ್ಲೆಯಾದ್ಯಂತ, ಸಮೀಕ್ಷೆ ಮೂಲಕ, ಒಟ್ಟು 460 ವಿಮುಕ್ತ ದೇವದಾಸಿಯರ ಮಾಹಿತಿ ಸಂಗ್ರಹಿಸಲಾಗಿದೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ಉಪ ನಿರ್ದೇಶಕಿ ರೇವತಿ ಹೊಸಮಠ, ತಿಳಿಸಿದ್ದಾರೆ. ದಾಖಲೆಯ ಪ್ರಕಾರ, ಜಿಲ್ಲೆಯಲ್ಲಿದ್ದ ಒಟ್ಟು 900 ವಿಮುಕ್ತ ದೇವದಾಸಿಯರ ಪೈಕಿ, 443 ಜನ ಮೃತಪಟ್ಟಿದ್ದಾರೆ. 30 ಜನ ವಿಮುಕ್ತ ದೇವದಾಸಿಯರು ಅನಾರೋಗ್ಯದಿಂದ ಬಳಲುತ್ತಿದ್ದು, ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಲು, ಸೂಕ್ತ ನಿರ್ದೇಶನಕ್ಕಾಗಿ ಕಾಯಲಾಗುತ್ತಿದೆ. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಗೆ ಕರೆಯಿಸಿ, ದತ್ತಾಂಶ ಸಂಗ್ರಹಿಸಲಾಗಿದೆ ಎಂದು, ಮಾಹಿತಿ ನೀಡಿದ್ದಾರೆ.

<><><>

ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕು ನವಿಲುತೀರ್ಥದ, ಶ್ರೀ ರೇಣುಕಾ ಎಲ್ಲಮ್ಮ ಮಲಪ್ರಭಾಜಲಾಶಯದಿಂದ, ಹಿಂಗಾರು ಹಂಗಾಮಿಗಾಗಿ ಹರಿಸಲಾಗುತ್ತಿರುವ ನೀರನ್ನು, ಈ ತಿಂಗಳ 15ನೇ ತಾರೀಖು, ಕುಡಿಯುವ ನೀರು ಪೂರೈಕೆಗಾಗಿ ಮೀಸಲಿರಿಸಿ, ಸ್ಥಗಿತಗೊಳಿಸಲಾಗುವುದು ಎಂದು, ಅಧೀಕ್ಷಕ ಅಭಿಯಂತರರು, ತಿಳಿಸಿದ್ದಾರೆ. ಈ ವರೆಗೆ ಒಟ್ಟು 80 ದಿನಗಳ ಕಾಲ, ಜಲಾಶಯದಿಂದ ಕೃಷಿಗಾಗಿ, ನೀರು ಹರಿಸಲಾಗಿದೆ ಎಂದು, ಮಲಪ್ರಭಾ ಯೋಜನೆ, ನೀರಾವರಿ ಸಲಹಾ ಸಮಿತಿ ತಿಳಿಸಿದೆ.

<><><>

ಮಂಗಳೂರಿನ, ಪಿಲಿಕುಳ ಗಾಲ್ಫ್ ಕ್ಲಬ್‌ನಲ್ಲಿ, ದೇಶದ ಪ್ರಥಮ, ಹೊನಲು ಬೆಳಕಿನ ಪ್ರೊ–ಆರ್ಮ್ ಗಾಲ್ಫ್ ಟೂರ್ನಮೆಂಟ್, 'ಪ್ರೊ–ಆರ್ಮ್ ಮಂಗಳೂರು ಕಪ್ ಟೂರ್ನಮೆಂಟ್' ಜರುಗಿತು. ವಿಶ್ವ ದರ್ಜೆಯ ವೃತ್ತಿಪರ ಗಾಲ್ಫ್ ಆಟಗಾರರಾದ, ಅಮನ್ ರಾಜ್, ಆರ್ಯನ್ ರೂಪ ಆನಂದ್, ದಿವ್ಯಾಂಶು ಬಜಾಜ್, ಎಂ. ಧರ್ಮ, ಆಲಾಪ್ ಐ.ಎಲ್., ಯಶಸ್ ಚಂದ್ರ ಎಂ.ಎಸ್., ಉದಯನ್ ಮಾನೆ, ಖಾಲಿನ್ ಜೋಶಿ, ಸ್ನೇಹಾ ಸಿಂಗ್, ಅವನಿ ಪ್ರಶಾಂತ, ಚಿಕ್ಕರಂಗಪ್ಪ ಎಸ್. ಮತ್ತು ಸಮರ್ಥ್ ದ್ವಿವೇದಿ ಭಾಗವಹಿಸಿದ್ದರು. ಗಾಲ್ಫ್ ಆಟಗಾರ, ಚಿಕ್ಕರಂಗಪ್ಪ ಮಾತನಾಡಿ, ಪಿಲಿಕುಳ ಗಾಲ್ಫ್ ಕ್ರೀಡಾಂಗಣ, ಯುವ ಕ್ರೀಡಾ ಪ್ರತಿಭೆಗಳಿಗೆ, ಉತ್ತಮ ವೇದಿಕೆಯಾಗಿದೆ, ಎಂದರು.

<><><>

ಮುಂಬರುವ ಗ್ರಾಮ, ತಾಲೂಕು ಜಿಲ್ಲಾ ಪಂಚಾಯಿತಿ ಚುನಾವಣೆಗಳ ಸ್ಪರ್ಧಾಕಾಂಕ್ಷಿಗಳು, ಹಳ್ಳಿಗಳಿಗೆ ತೆರಳಿ, ಕೇಂದ್ರ ಪುರಸ್ಕೃತ, ವಿ.ಬಿ. ಜಿ ರಾಮ್ ಜಿ ಯೋಜನೆಯ, ಅನುಕೂಲಗಳ ಬಗ್ಗೆ, ಗ್ರಾಮೀಣ ಜನರಲ್ಲಿ, ಜಾಗೃತಿ ಮೂಡಿಸಬೇಕು ಎಂದು, ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಕೋರಿದ್ದಾರೆ. ದಾವಣಗೆರೆಯಲ್ಲಿ, ಬಿ.ಜೆ.ಪಿ. ಆಯೋಜಿಸಿದ್ದ, ವಿ.ಬಿ. ಜಿ ರಾಮ್ ಜಿ ಯೋಜನೆ ಕುರಿತ, ಜಿಲ್ಲಾ ಜಾಗೃತಿ ಸಮಾವೇಶ ಉದ್ಘಾಟಿಸಿ, ಅವರು ಮಾತನಾಡಿದರು. ನಿರುದ್ಯೋಗ ಭತ್ಯೆಗೆ, ಬಲವಾದ ನಿಬಂಧನೆ, ಸಕಾಲಿಕ ವೇತನ ಪಾವತಿ ಮತ್ತು ವಿಳಂಬಕ್ಕೆ ಪರಿಹಾರ, ಗ್ರಾಮ ಸಭೆಯ ಮೂಲಕ, ವಿಕಸಿತ ಗ್ರಾಮ ಪಂಚಾಯಿತಿ ಯೋಜನೆ ಅನುಷ್ಠಾನ, ಗ್ಯಾರಂಟಿ ಫಾರ್ ರೋಜಗಾರ್ & ಆಜೀವಿಕಾ ಮಿಷನ್ – ವಿ.ಜಿ.ಪಿ.ಪಿ. ಅಡಿ, ಎಲ್ಲ ಯೋಜನೆಗಳ ಸಂಯೋಜನೆ ಹಾಗೂ ತಂತ್ರಜ್ಞಾನದ ಮೂಲಕ ಸಬಲೀಕರಣವನ್ನು, ಕೇಂದ್ರ ಖಾತ್ರಿ ಪಡಿಸಲಿದೆ, ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದು, ಬೆಳಗ್ಗೆ 11 ಗಂಟೆಗೆ, 2026–27ನೇ ಸಾಲಿನ, ಕೇಂದ್ರದ ಆಯವ್ಯಯ ಮಂಡನೆ.
- ಗ್ರಾಹಕರ ಹಕ್ಕು ಉಲ್ಲಂಘನೆಗೆ, ಪರಿಹಾರ ಒದಗಿಸುವಲ್ಲಿ, ಕರ್ನಾಟಕ, ದೇಶಕ್ಕೆ ಎರಡನೇ ಸ್ಥಾನ.
- ಧಾರವಾಡ ಜಿಲ್ಲೆಯಿಂದ, ಮಾಹಿತಿ ಆಯೋಗಕ್ಕೆ, ಸಾವಿರದ 4 ನೂರಾ 85 ಮೇಲ್ಮನವಿ ಅರ್ಜಿಗಳು ಸಲ್ಲಿಕೆ.
- ಭಾರತೀಯ ಕರಾವಳಿ ಕಾವಲು ಪಡೆಯ, 50ನೇ ಸಂಸ್ಥಾಪನಾ ದಿನಾಚರಣೆ, ಇಂದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>